127

## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ | 1341 (1406) |
| ಮಾನ್ಯ ಸದಸ್ಯರ ಹೆಸರು | ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ) |
| ಉತ್ತರಿಸಬೇಕಾದವರು | ಮಾನ್ಯ ಮುಖ್ಯಮಂತ್ರಿಯವರು |
| ಉತ್ತರಿಸುವ ದಿನಾಂಕ | 20.03.2025 |

| | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಗೆ ಮಂಜೂರಾಗಿರುವ ಮತ್ತು ಈ ಇಲಾಖೆಯಿಂದ ಅನ್ಯ ಇಲಾಖೆ, ನಿಗಮ ಹಾಗೂ ಮಂಡಳಿಗಳಿಗೆ ನಿಯೋಜನೆ ಮೇರೆಗೆ ಮೀಸಲಿರಿಸಿದ ಗ್ರೂಪ್ ಎ,ಬಿ, ಮತ್ತು ಸಿ ವೃಂದದ ಹುದ್ದೆಗಳು ಎಷ್ಟು; ಕಾರ್ಯ ನಿರ್ವಹಿಸುತ್ತಿರುವ ಹುದ್ದೆಗಳು ಎಷ್ಟು; ಖಾಲಿ ಹುದ್ದೆಗಳು ಎಷ್ಟು; ಹುದ್ದೆಗಳ ಸಂಪೂರ್ಣ ಮಾಹಿತಿಯನ್ನು ನೀಡುವುದು; | ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಗೆ ಮಂಜೂರಾಗಿರುವ ಮತ್ತು ಈ ಇಲಾಖೆಯಿಂದ ಅನ್ಯ ಇಲಾಖೆ, ನಿಗಮ ಹಾಗೂ ಮಂಡಳಿಗಳಿಗೆ ನಿಯೋಜನೆ ಮೇರೆಗೆ ಮೀಸಲಿರಿಸಿದ ಗ್ರೂಪ್ ಎ,ಬಿ, ಮತ್ತು ಸಿ ವೃಂದದ ಹುದ್ದೆಗಳು; ಕಾರ್ಯ ನಿರ್ವಹಿಸುತ್ತಿರುವ ಹುದ್ದೆಗಳು; ಖಾಲಿ ಹುದ್ದೆಗಳು; ಹುದ್ದೆಗಳ ಸಂಪೂರ್ಣ ವಿವರಗಳನ್ನು ಅನುಬಂಧ 1 ಮತ್ತು 2 ರಲ್ಲಿ ನೀಡಲಾಗಿದೆ. |
| ಆ | ಕ.ರಾ.ಲೆ.ಪ ಮತ್ತು ಲೆಕ್ಕಪತ್ರ ಇಲಾಖೆಯಿಂದ ನಿಯೋಜನೆಗೆ ಮೀಸಲಿರಿಸಿದ ಹುದ್ದೆಗಳನ್ನು ಹಂಚಿಕೆ ಮಾಡುವಲ್ಲಿನ ತೊಡಕುಗಳನ್ನು ನಿವಾರಿಸುವ ಕುರಿತು ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಇಲ್ಲಿಯವರೆಗೆ ಎಷ್ಟು ಸಭೆಗಳನ್ನು ನಡೆಸಲಾಗಿದೆ;(ನಡೆದಿರುವ ಎಲ್ಲಾ ಸಭೆಗಳ ಸಭಾ ನಡಾವಳಿಗಳ ಪ್ರತಿಗಳೊಂದಿಗೆ ದಿನಾಂಕ:31.01.2017 ರಂದು ಹೊರಡಿಸಿರುವ ಆದೇಶದ ಪ್ರತಿ ಒದಗಿಸುವುದು) ರಾಜ್ಯ ಲೆಕ್ಕಪತ್ರ ಇಲಾಖೆಯಿಂದ ಇತರ ಇಲಾಖೆಗಳಲ್ಲಿ ನಿಯೋಜನೆ ಮೇರೆಗೆ ಮೀಸಲಿರಿಸಿದ ಹುದ್ದೆಗಳಿಗೆ ಹಂಚಿಕೆ ಮತ್ತು ನಿಯೋಜನೆ ಮಾಡುವ ಕುರಿತು ದಿನಾಂಕ:30.10.2012 ರಿಂದ ಇಲ್ಲಿಯವರೆಗೆ ಆರ್ಥಿಕ ಇಲಾಖೆಯು ಹೊರಡಿಸಿರುವ ಆದೇಶವೇನು;(ಎಲ್ಲಾ ಆದೇಶ, ಸುತ್ತೋಲೆ ಹಾಗೂ ಮಾರ್ಗಸೂಚಿಗಳ ಪ್ರತಿಗಳನ್ನು ನೀಡುವುದು) | ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯಿಂದ ನಿಯೋಜನೆಗೆ ಮೀಸಲಿರಿಸಿದ ಹುದ್ದೆಗಳನ್ನು ಹಂಚಿಕೆ ಮಾಡುವಲ್ಲಿನ ತೊಡಕುಗಳನ್ನು ನಿವಾರಿಸುವ ಕುರಿತು ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ನಡೆದ ಸಭಾ ನಡಾವಳಿಗಳ ಪ್ರತಿ; ದಿನಾಂಕ:30.10.2012 ರಿಂದ ಇಲ್ಲಿಯವರೆಗೆ ಆರ್ಥಿಕ ಇಲಾಖೆಯು ಹೊರಡಿಸಿರುವ ಆದೇಶ, ಸುತ್ತೋಲೆ ಹಾಗೂ ಮಾರ್ಗಸೂಚಿಗಳ ಪ್ರತಿಗಳನ್ನು ಅನುಬಂಧ 3, 4, ಮತ್ತು 5 ರಲ್ಲಿ ಒದಗಿಸಲಾಗಿದೆ. |

| | | |
|---|---|---|
| ಇ | ಸಂಬಂಧಪಟ್ಟ ಇಲಾಖೆಗಳಲ್ಲಿನ ಪ್ರ.ದ.ಲೆ.ಸಹಾಯಕ ಹುದ್ದೆಗೆ ವೃಂದ ಮತ್ತು ನೇಮಕಾತಿ ನಿಯಮಗಳಿಲ್ಲದಿರುವುದರಿಂದ ದಿನಾಂಕ:30.10.2012ರ ಮಾರ್ಗಸೂಚಿಗಳನ್ನು ಅನುಸರಿಸಿ ವೃಂದ ಮತ್ತು ನೇಮಕಾತಿ ನಿಯಮಗಳನ್ನು ರಚಿಸುವ ಅಥವಾ ಕಾರ್ಯಕಾರಿ ಆದೇಶ ಹೊರಡಿಸುವ ಕುರಿತು ಹಾಗೂ ಲೆಕ್ಕಪತ್ರ ಕಾರ್ಯಗಳಿಗಾಗಿ ಕೆಳ ಹಂತದ ಹುದ್ದೆಗಳಲ್ಲಿ ಕಿ/ದ್ವಿ.ಲೆ.ಸ ಪ್ರ.ದ.ಲೆ.ಸ ಮತ್ತು ಲೆಕ್ಕಾಧೀಕ್ಷಕರು ಸಾಧಾರಣವಾಗಿ ವೃಂದ ಬಲದ ಶೇ.50ರಕ್ಕಿಂತ ಹೆಚ್ಚಾಗದಂತೆ ಸಂಬಂಧಪಟ್ಟ ಇಲಾಖೆಗಳಲ್ಲಿ ಕೌಶಲ್ಯ ಮತ್ತು ಅನುಭವ ಹೊಂದಿದ ಸಿಬ್ಬಂದಿಗಳಿಗೆ ಪದೋನ್ನತಿ ನೀಡುವ ಮೂಲಕ ಭರ್ತಿ ಮಾಡುವ ಕುರಿತು ಆದೇಶಗಳಿದ್ದಾಗ್ಯೂ ಕೆಲವೊಂದು ಇಲಾಖೆಗಳಲ್ಲಿ ಪಾಲಿಸದೇ ಇರುವುದರಿಂದ ಆ ಹುದ್ದೆಗಳು ಖಾಲಿಯೇ ಇದ್ದು, ಆಡಳಿತಾತ್ಮಕವಾಗಿ ತೊಂದರೆಯಾಗುತ್ತಿರುವ ಹಿನ್ನೆಲೆಯಲ್ಲಿ ಸಂಬಂಧಪಟ್ಟ ಇಲಾಖೆಗಳಲ್ಲಿ ಅರ್ಹರಿಗೆ ಪದೋನ್ನತಿ ನೀಡುವ ಮೂಲಕ ಕೆಳ ಹಂತದ ಹುದ್ದೆಗಳನ್ನು 50% ಗೆ ಹೆಚ್ಚಾಗದಂತೆ ಭರ್ತಿ ಮಾಡುವ ಕುರಿತು ಆರ್ಥಿಕ ಇಲಾಖೆಯ ಸ್ಪಷ್ಟ ನಿಲುವೇನು?( ಈ ಕುರಿತು ಸಂಪೂರ್ಣ ಮಾಹಿತಿಯನ್ನು ನೀಡುವುದು) | ಈ ಇಲಾಖೆಯಲ್ಲಿ ಖಾಲಿ ಇರುವ ಲೆಕ್ಕ ಸಹಾಯಕರು 242 ಹುದ್ದೆಗಳನ್ನು ಭರ್ತಿ ಮಾಡುವ ಸಂಬಂಧ ಕರ್ನಾಟಕ ಲೋಕಸೇವಾ ಆಯೋಗದಲ್ಲಿ ಅಂತಿಮ ಆಯ್ಕೆಪಟ್ಟಿ ಹೊರಡಿಸಿ ಈ ಇಲಾಖೆಗೆ ಹಂಚಿಕೆ ಮಾಡಲಾಗಿದೆ. ಅದರಂತೆ 242 ಅಭ್ಯರ್ಥಿಗಳ ಪೈಕಿ 228 ಅಭ್ಯರ್ಥಿಗಳು ಮೂಲ ದಾಖಲಾತಿಯನ್ನು ಸಲ್ಲಿಸಿದ್ದು ಪೊಲೀಸ್ ವರದಿ ಹಾಗೂ ಪ್ರಮಾಣ ಪತ್ರ ನೈಜತೆ ವರದಿ ಸ್ವೀಕೃತವಾದ ಕೂಡಲೇ ನೇಮಕಾತಿ ಆದೇಶ ಹೊರಡಿಸಲಾಗುವುದು.<br>ಮುಂದುವರೆದು, ಈ ಇಲಾಖೆಯಲ್ಲಿ ಖಾಲಿ ಇರುವ ನೇರ ನೇಮಕಾತಿ ಹುದ್ದೆಗಳ ಪೈಕಿ ಸಹಾಯಕ ನಿಯಂತ್ರಕರು -15, ಲೆಕ್ಕಪರಿಶೋಧನಾಧಿಕಾರಿಗಳು 15, ಲೆಕ್ಕ ಸಹಾಯಕರು-50 ಹಾಗೂ ಕಿರಿಯ ಲೆಕ್ಕ ಸಹಾಯಕರು-30 ಹೀಗೆ ಒಟ್ಟಾರೆ-110 ಹುದ್ದೆಗಳ ಭರ್ತಿಗೆ ಆರ್ಥಿಕ ಇಲಾಖೆಯು ದಿನಾಂಕ:04.03.2025 ರ ಪತ್ರದಲ್ಲಿ ಅನುಮತಿ ನೀಡಲಾಗಿದೆ. ಆದರೆ, ಸರ್ಕಾರದ ಸುತ್ತೋಲೆ ಸಂಖ್ಯೆ:ಸಿಆಸುಇ 388 ಸೇನೆನಿ 2024 ದಿನಾಂಕ:25.11.2024ರಲ್ಲಿ ರಾಜ್ಯ ಸಿವಿಲ್ ಸೇವೆಗಳಲ್ಲಿನ ಹುದ್ದೆಗಳ ನೇಮಕಾತಿಗಾಗಿ ಹೊಸದಾಗಿ ಅಧಿಸೂಚನೆಯನ್ನು ಹೊರಡಿಸುವುದನ್ನು ತಡೆಯಿಡಿಯಲಾಗಿದೆ. ಸದರಿ ನಿರ್ಬಂಧ ಸಡಿಲಗೊಂಡ ನಂತರ ಕರ್ನಾಟಕ ಲೋಕಸೇವಾ ಆಯೋಗಕ್ಕೆ ಮುಂದಿನ ಪ್ರಕ್ರಿಯೆಗಳಿಗೆ ಕ್ರಮ ಜರುಗಿಸಲಾಗುವುದು. (ವಿವರಗಳನ್ನು 6 ಮತ್ತು 7 ರಲ್ಲಿ ಒದಗಿಸಲಾಗಿದೆ)<br>ನಿಯೋಜನೆಯ ಅವಧಿ ಸಾಮಾನ್ಯವಾಗಿ 03 ವರ್ಷಗಳಾಗಿರುತ್ತದೆ ಸರ್ಕಾರ ಅನುಮೋದನೆ ಮೇರೆಗೆ 05 ವರ್ಷಗಳವರೆಗೆ ನಿಯೋಜನಾವಧಿಯನ್ನು ವಿಸ್ತರಣೆ ಮಾಡಬಹುದಾಗಿದೆ. ಸದರಿ ಇಲಾಖೆಗಳ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯಿಂದ ತುಂಬಲು ನಿಗದಿಪಡಿಸಲಾದ (ಎನ್-ಕೇಡರ್) ಹುದ್ದೆಗಳಿಗೆದುರಾಗಿ ಈ ಇಲಾಖೆಯ ಅಧಿಕಾರಿ ಮತ್ತು ನೌಕರರನ್ನು ನಿಯೋಜಿಸಲಾಗುತ್ತಿದೆ. ಲೆಕ್ಕಪತ್ರಗಳ ವಿಷಯದಲ್ಲಿ ಈ ಇಲಾಖೆಯು ತಾಂತ್ರಿಕ ಪರಿಣಿತಿ ಹಾಗೂ ಹೆಚ್ಚಿನ ವಿದ್ಯಾರ್ಹತೆಗಳನ್ನು ಹೊಂದಿರುವ ಅಧಿಕಾರಿ/ ಸಿಬ್ಬಂದಿಗಳನ್ನು ಒಳಗೊಂಡಿರುತ್ತದೆ.<br>ದಿನಾಂಕ:21.07.2023ರಂದು ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡಾವಳಿ ಹಾಗೂ ಸರ್ಕಾರದ ಆರ್ಥಿಕ ಇಲಾಖೆಯ ಆದೇಶ ದಿನಾಂಕ:15.09.2023ರನ್ವಯ ಗ್ರೂಪ್ ಎ ಮತ್ತು ಬಿ ವೃಂದದ ಲೆಕ್ಕಪತ್ರ ಶಾಖೆಗೆ ಸಂಬಂಧಿಸಿದ |

| | | |
|---|---|---|
| | | ಹುದ್ದೆಗಳನ್ನು ದಿನಾಂಕ:30.10.2012 ರ ಮಾರ್ಗಸೂಚಿಯಲ್ಲಿ ತಿಳಿಸಿರುವಂತೆ ಸಂಪೂರ್ಣವಾಗಿ ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯಿಂದಲೇ ಭರ್ತಿಮಾಡತಕ್ಕದ್ದಾಗಿದೆ.<br><br>ಲೆಕ್ಕಪತ್ರ ಕಾರ್ಯಗಳಿಗಾಗಿ ಕೆಳಹಂತದ ಹುದ್ದೆಗಳಾದ ಕಿರಿಯ ಲೆಕ್ಕ ಸಹಾಯಕರು ಮತ್ತು ಪ್ರಥಮ ದರ್ಜೆ ಲೆಕ್ಕ ಸಹಾಯಕರು ಸಾಧಾರಣವಾಗಿ ವೃಂದ ಬಲದ ಶೇ.50 ಕ್ಕಿಂತ ಹೆಚ್ಚಾಗದಂತೆ ಸಂಬಂಧಪಟ್ಟ ಇಲಾಖೆಗಳಲ್ಲಿ ಕೌಶಲ್ಯ ಮತ್ತು ಅನುಭವ ಹೊಂದಿದ ಸಿಬ್ಬಂದಿಗಳಿಗೆ ಪದೋನ್ನತಿ ನೀಡುವ ಮೂಲಕ ಭರ್ತಿ ಮಾಡಲು ಹುದ್ದೆಗಳನ್ನು ಗುರುತಿಸಲು ಸೂಚಿಸಲಾಗಿದೆ. ಮುಂದುವರೆದು ಸದರಿ ಮಾರ್ಗಸೂಚಿಗಳನ್ನು ಉಲ್ಲಂಘಿಸಿ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಈಗಾಗಲೇ ರಚಿಸಿದ್ದಲ್ಲಿ ಅಥವಾ ಕಾರ್ಯಕಾರಿ ಆದೇಶ ಹೊರಡಿಸಿದ್ದಲ್ಲಿ ,ಅವುಗಳನ್ನು ಸೂಕ್ತವಾಗಿ ತಿದ್ದುಪಡಿ ಮಾಡಲು / ಹಿಂಪಡೆದು ಕ್ರಮ ಕೈಗೊಳ್ಳತಕ್ಕದ್ದು.<br><br>ಅಲ್ಲದೇ ಲೆಕ್ಕಪತ್ರ ಮತ್ತು ಲೆಕ್ಕಪರಿಶೋಧನೆ ಸೇವೆಗೆ ಸಂಬಂಧಿಸಿದ ಹುದ್ದೆಗಳ ನೇರ ನೇಮಕಾತಿಯನ್ನು ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯ ಮೂಲಕ ಭರ್ತಿ ಮಾಡಿ ವಿವಿಧ ಇಲಾಖೆಗಳಿಗೆ ಪೂರೈಸುವುದು ಹಾಗೂ ಯಾವುದೇ ಇಲಾಖೆಗಳು ಲೆಕ್ಕಪತ್ರ ಸೇವೆಗೆ ಸಂಬಂಧಿಸಿದ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡತಕ್ಕದ್ದಲ್ಲ.<br><br>ಸದ್ಯ ಖಾಲಿ ಇರುವ ಕೆಳಹಂತದ ಹುದ್ದೆಗಳಾದ ಲೆಕ್ಕಾಧೀಕ್ಷಕರು, ಪ್ರಥಮ ದರ್ಜೆ ಲೆಕ್ಕ ಸಹಾಯಕರು ಮತ್ತು ಕಿರಿಯ ಲೆಕ್ಕ ಸಹಾಯಕರು ಹುದ್ದೆಗಳಿಗೆ ಅರ್ಹ ನೌಕರರನ್ನು ಅದೇ ಇಲಾಖೆಯ ನೌಕರರಿಂದ ಶೇ.50 ಮೀರದಂತೆ ತುಂಬಲು ಈ ಇಲಾಖೆಯ ಅಭ್ಯಂತರವಿರುವುದಿಲ್ಲ. |

**ಆಇ 133 ರಾಲೆಪ 2025**

(ಸಿದ್ದರಾಮಯ್ಯ)
**ಮುಖ್ಯಮಂತ್ರಿ**

## ಅನುಬಂಧ – 1

## ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯ ಹುದ್ದೆಗಳ ವಿವರ

| ಕ್ರ ಸಂ | ಗ್ರೂಪ್ | ಹುದ್ದೆಗಳ ಹೆಸರು | ಮಂಜೂರಾದ ಹುದ್ದೆಗಳು | ಭರ್ತಿ ಮಾಡಲಾದ ಹುದ್ದೆಗಳು | ಖಾಲಿ ಇರುವ ಹುದ್ದೆಗಳು |
|---|---|---|---|---|---|
| 1 | 2 | 3 | 4 | 5 | 6 |
| 1 | ಗ್ರೂಪ್–ಎ | ಪ್ರಧಾನ ನಿರ್ದೇಶಕರು | 1 | 1 | 0 |
| 2 | | ನಿರ್ದೇಶಕರು | 1 | 1 | 0 |
| 3 | | ಅಪರ ನಿರ್ದೇಶಕರು | 13 | 11 | 2 |
| 4 | | ಜಂಟಿ ನಿರ್ದೇಶಕರು | 144 | 107 | 37 |
| 5 | | ಹಿರಿಯ ಉಪ ನಿರ್ದೇಶಕರು | 112 | 54 | 58 |
| 6 | | ಉಪ ನಿರ್ದೇಶಕರು | 327 | 215 | 112 |
| 7 | ಗ್ರೂಪ್–ಬಿ | ಲೆಕ್ಕಪರಿಶೋಧನಾಧಿಕಾರಿ | 608 | 385 | 223 |
| 8 | | ಲೆಕ್ಕಾಧೀಕ್ಷಕರು | 830 | 433 | 397 |
| 9 | ಗ್ರೂಪ್–ಸಿ | ಸಿಸ್ಟಮ್ ಅನಾಲಿಸ್ಟ್ | 1 | 0 | 1 |
| 10 | | ಲೆಕ್ಕ ಸಹಾಯಕರು | 1885 | 1012 | 873 |
| 11 | | ಶೀಘ್ರಲಿಪಿಗಾರರು | 27 | 13 | 14 |
| 12 | | ಕಿರಿಯ ಲೆಕ್ಕ ಸಹಾಯಕರು | 494 | 206 | 288 |
| 13 | | ಹಿರಿಯ ಬೆರಳಚ್ಚುಗಾರರು | 10 | 0 | 10 |
| 14 | | ದತ್ತಾಂಶ ನಮೂದು ಸಹಾಯಕರು | 100 | 25 | 75 |
| 15 | | ವಾಹನ ಚಾಲಕರು | 60 | 1 | 59 |
| | | ಒಟ್ಟು | 4613 | 2464 | 2149 |

ಪ್ರಧಾನ ನಿರ್ದೇಶಕರು
ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು
ಲೆಕ್ಕಪತ್ರ ಇಲಾಖೆ, ಬೆಂಗಳೂರು.

## ಅನುಬಂಧ – 2

## ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯ ಹುದ್ದೆಗಳ ವಿವರ

| ಕ್ರ ಸಂ | ಗ್ರೂಪ್ | ಹುದ್ದೆಗಳ ಹೆಸರು | ಒಟ್ಟು ಮಂಜೂರಾದ ಹುದ್ದೆಗಳು | ಈ ಇಲಾಖೆಯ ಹುದ್ದೆಗಳು | | | ಅನ್ಯ ಇಲಾಖೆ, ನಿಗಮ, ಮಂಡಳಿ ಮತ್ತು ಸಂಸ್ಥೆಗಳಲ್ಲಿ ಗುರುತಿಸಲ್ಪಟ್ಟ ಹುದ್ದೆಗಳು | | |
|---|---|---|---|---|---|---|---|---|---|
| | | | | ಮಂಜೂರಾದ ಹುದ್ದೆಗಳು | ಭರ್ತಿ ಮಾಡಲಾದ ಹುದ್ದೆಗಳು | ಖಾಲಿ ಇರುವ ಹುದ್ದೆಗಳು | ಮಂಜೂರಾದ ಹುದ್ದೆಗಳು | ಭರ್ತಿ ಮಾಡಲಾದ ಹುದ್ದೆಗಳು | ಖಾಲಿ ಇರುವ ಹುದ್ದೆಗಳು |
| 1 | 2 | 3 | 4 | 5 | 6 | 7 | 8 | 9 | 10 |
| 1 | ಗ್ರೂಪ್–ಎ | ಪ್ರಧಾನ ನಿರ್ದೇಶಕರು | 1 | 1 | 1 | 0 | 0 | 0 | 0 |
| 2 | | ನಿರ್ದೇಶಕರು | 1 | 1 | 1 | 0 | 0 | 0 | 0 |
| 3 | | ಅಪರ ನಿರ್ದೇಶಕರು | 13 | 6 | 4 | 2 | 7 | 7 | 0 |
| 4 | | ಜಂಟಿ ನಿರ್ದೇಶಕರು | 144 | 12 | 9 | 3 | 132 | 98 | 34 |
| 5 | | ಹಿರಿಯ ಉಪ ನಿರ್ದೇಶಕರು | 112 | 27 | 14 | 13 | 85 | 40 | 45 |
| 6 | | ಉಪ ನಿರ್ದೇಶಕರು | 327 | 42 | 22 | 20 | 285 | 193 | 92 |
| 7 | ಗ್ರೂಪ್–ಬಿ | ಲೆಕ್ಕಪರಿಶೋಧನಾಧಿಕಾರಿ | 608 | 129 | 92 | 37 | 479 | 293 | 186 |
| 8 | | ಲೆಕ್ಕಾಧೀಕ್ಷಕರು | 830 | 67 | 41 | 26 | 763 | 392 | 371 |
| 9 | ಗ್ರೂಪ್–ಸಿ | ಸಿಸ್ಟಮ್ ಅನಾಲಿಸ್ಟ್ | 1 | 1 | 0 | 1 | 0 | 0 | 0 |
| 10 | | ಲೆಕ್ಕ ಸಹಾಯಕರು | 1885 | 410 | 258 | 152 | 1475 | 754 | 721 |
| 11 | | ಶೀಘ್ರಲಿಪಿಗಾರರು | 27 | 27 | 13 | 14 | 0 | 0 | 0 |
| 12 | | ಕಿರಿಯ ಲೆಕ್ಕ ಸಹಾಯಕರು | 494 | 54 | 38 | 16 | 440 | 168 | 272 |
| 13 | | ಹಿರಿಯ ಬೆರಳಚ್ಚುಗಾರರು | 10 | 10 | 0 | 10 | 0 | 0 | 0 |
| 14 | | ದತ್ತಾಂಶ ನಮೂದು ಸಹಾಯಕರು | 100 | 97 | 25 | 72 | 3 | 0 | 3 |
| 15 | | ವಾಹನ ಚಾಲಕರು | 60 | 60 | 1 | 59 | 0 | 0 | 0 |
| | | ಒಟ್ಟು | 4613 | 944 | 519 | 425 | 3669 | 1945 | 1724 |

ಪ್ರಧಾನ ನಿರ್ದೇಶಕರು
ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ
ಮತ್ತು ಲೆಕ್ಕಪತ್ರ ಇಲಾಖೆ
ಬೆಂಗಳೂರು

6DV9-015.03

# PROCEEDINGS OF THE GOVERNMENT OF KARNATAKA

Sub: Posting of officials of State Accounts Department for accounting and audit functions in various departments – Issue of guiding principles for all departments – reg.

**Read:**

1. Observation/direction of the Hon'ble High Court of Karnataka while hearing the Writ Petitions No.19567 – 19571/2009 on 12.9.2012.
2. Proceedings of the meeting dated 24.9.2012 chaired by Chief Secretary to Government.
3. Memo submitted by the Advocate General, Karnataka before the Hon'ble High Court of Karnataka, on 30.09.2012.
4. U.O.Note No.DPAR 148 SRD 2012 dated 18.10.2012, received from Department of Personnel & Administrative Reforms (Service Rules).

**Preamble:**

The accounting and audit functions in various departments are carried out traditionally by the officials of State Accounts Department posted on deputation to those departments. For enabling such deputation of the State Accounts Department officials with appropriate skills and experience, the Cadre & Recruitment (C & R) Rules of those departments earmark the account and audit functions related posts for the officials of State Accounts Department only. These arrangements have been put in place as a policy to ensure separation between implementation and finance related functions.

2. The above arrangements were changed by certain departments by amending their C & R Rules to fill up certain posts by promoting their own officials instead of earmarking for the State Accounts Department officials. During 2008, the Rural Development and Panchayat Raj Department framed C & R Rules for Panchayat Raj Engineering Department wherein all the posts in the cadres of Accounts Superintendents, First Division Accounts Assistants and Second Division Accounts Assistants which were earmarked hitherto for the

State Accounts Department officials are to be filled up by promoting the staff of Panchayat Raj Engineering Department itself. This was challenged by the aggrieved staff of State Accounts Department before the Karnataka Administrative Tribunal vide Application No.2671/2008 and other related applications. They came to be dismissed vide order dated 5.6.2009. The said order was challenged by them before the Hon'ble High Court of Karnataka in Writ Petition Nos 19567-71/2009. In the context of differing approaches followed by various departments in provision of the staff for accounting services and challenge of such actions in the Writ Petitions, Hon'ble High Court directed the Government to resolve the matter.

3. After examining all aspects of the case and after consulting all concerned in this case the Government proceeds to issue the following orders.

**Government Order No.FD 304 SAD 2011**
**Bangalore, dated 30.10.2012**

Under the circumstances explained in preamble, the Government hereby frames the following guidelines to be implemented by all departments with a view to ensure proper maintenance of the accounts of the state government.

a. As far as possible, separation between implementation and accounting functions should be maintained.
b. State Accounts Department should continue to provide staff with required skills and experience to various departments for their accounting and audit needs.
c. Senior staff for accounting and audit functions in various departments at senior levels (Group A and B gazetted posts) must be sourced exclusively from State Accounts Department.
d. Even for the accounting and audit staff in various departments at junior levels, the pre-dominant mode should be the sourcing from State Accounts Department.
e. A moderate number of posts at junior levels (Second Division Account Assistants, First Division Account Assistants and Account Superintendents) relating to the accounting functions not

exceeding 50% of the total posts at these levels may, however, be earmarked for officials of the concerned departments for filling up through promotion provided they have the required skills and experience. There should not be any direct recruitment of the staff for accounts related posts in these departments so as to avoid potential stagnation problem for such staff. However the exact earmarking for the concerned department within the limit will be decided by the Cadre Review Committee headed by Additional Chief Secretary in consultation with Finance Department.

f. The skills, experience and training required for promotion of the officials to the accounts related posts in various departments should be the same as prescribed by State Accounts Department for its own employees at those levels. C & R Rules of the concerned departments opting for the option at "e" above should be amended accordingly and kept aligned with C&R Rules of State Accounts Department.

g. State Accounts Department should assist other departments opting for option "e" in training their account related staff as well as in imparting basic accounting skills to the general staff.

h. If any department has an exceptionally large need for accounting staff at junior level, e.g., 2500 posts of Second Division Account Assistants sanctioned for Gram Panchayats in the year 2010, such exceptional needs may be met from department specific recruitment after ascertaining non-availability of State Accounts Department employees from Finance Department. However, State Accounts Department should assist the concerned department in training such personnel.

i. The amendment carried out by RD & PR in year 2008 to C&R Rules of Panchayat Raj Engineering Department should be changed to limit the earmarking of the account related posts for the departmental officers as per the principles suggested above. The staff becoming surplus due to such new limit may be posted to Zilla or Taluka Panchayats or may be continued in their present posts in Panchayat Raj Engineering Department itself till their retirement.

j. The flexibility available in C&R Rules of Zilla Panchayats for account related posts should continue.

2. The government departments must ensure that the existing C & R Rules of their departments should be amended in accordance with the above guiding principles. Further, any proposal for framing or for amending the Cadre & Recruitment Rules of the government departments must strictly adhere to these guiding principles and the same should be followed scrupulously.

BY ORDER AND IN THE NAME OF THE
GOVERNOR OF KARNATAKA

(N.LAKSHMANA)
Under Secretary to Government,
Finance Department(Admn & Advances)

To

The Compiler, Karnataka Gazette, Bangalore.

**Copy to:**

1) The Principal Accountant General (A&E), Karnataka, Bangalore
2) The Advocate General, Karnataka, High Court Buildings, Bangalore.
3) All Principal Secretaries/Secretaries to Government.
4) All Heads of Departments/The Additional Secretary, DPAR (Service Rules).
5) The Controller, State Accounts Department, Bangalore.
6) All Joint/Deputy Secretaries in Finance Department
7) The Cabinet Section w.r.t. Subject No. ಸಿ:629/2012 dated 18.10.2012

ಅನು ೨೦೭೩ - 04

**ದಿನಾಂಕ:21/07/2023ರಂದು ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಮಾನ್ಯ ಉಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂ:2262/2023 (S-KAT) C./w 22229/2022 ರಲ್ಲಿ ದಿನಾಂಕ: 06/04/2023 ರಂದು ನೀಡಿರುವ ತೀರ್ಪಿನನ್ವಯ ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯಿಂದ ನಿಯೋಜನೆಗೆ ಮೀಸಲೀರಿಸಿದ ಹುದ್ದೆಗಳನ್ನು ಹಂಚಿಕೆ ಮಾಡುವಲ್ಲಿನ ತೊಡಕುಗಳನ್ನು ನಿವಾರಿಸುವ ಕುರಿತು ನಡೆದ ಸಭೆಯ ನಡವಳಿಗಳು**

ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು

| | |
|---|---|
| 1 | ಸರ್ಕಾರದ ಮುಖ್ಯ ಕಾರ್ಯದರ್ಶಿಯವರು |
| 2 | ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರು, ಆರ್ಥಿಕ ಇಲಾಖೆ |
| 3 | ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರು, ನಗರಾಭಿವೃದ್ಧಿ ಇಲಾಖೆ |
| 4 | ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರು, ಜಲಸಂಪನ್ಮೂಲ ಇಲಾಖೆ |
| 5 | ಸರ್ಕಾರದ ಪ್ರಧಾನ ಕಾರ್ಯದರ್ಶಿಯವರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ |
| 6 | ಸರ್ಕಾರದ ಪ್ರಧಾನ ಕಾರ್ಯದರ್ಶಿಯವರು, ಲೋಕೋಪಯೋಗಿ ಇಲಾಖೆ, |
| 7 | ಸರ್ಕಾರದ ಕಾರ್ಯದರ್ಶಿಯವರು, ಆರ್ಥಿಕ ಇಲಾಖೆ (ಆ & ಸಂ) |
| 8 | ಸರ್ಕಾರದ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ, |
| 9 | ಪ್ರಧಾನ ನಿರ್ದೇಶಕರು, ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ, |

ಲೋಕೋಪಯೋಗಿ ಇಲಾಖೆಯು ದಿನಾಂಕ 14.03.2022ರಂದು ಹೊರಡಿಸಿದ ಕಾರ್ಯಕಾರಿ ಆದೇಶ ಸಂ:ಲೋಇ 112 ಸೇಇಸಿ 2021ನ್ನು ಪ್ರಶ್ನಿಸಿ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯ ಅಧಿಕಾರಿಗಳು ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯಲ್ಲಿ ಸಲ್ಲಿಸಿದ ಅರ್ಜಿ ಸಂಖ್ಯೆ:1447-49/2022ರಲ್ಲಿ ದಿನಾಂಕ 29.08.2022ರಂದು ನೀಡಿರುವ ಆದೇಶದಲ್ಲಿ ಲೋಕೋಪಯೋಗಿ ಇಲಾಖೆಯ ಕಾರ್ಯಕಾರಿ ಆದೇಶವನ್ನು ರದ್ದುಪಡಿಸಿರುತ್ತದೆ. ಲೋಕೋಪಯೋಗಿ ಇಲಾಖೆಯು ದಿನಾಂಕ 29.02.2022ರ ತೀರ್ಪನ್ನು ಪ್ರಶ್ನಿಸಿ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಪಿಟಿಷನ್ ಸಂಖ್ಯೆ:2262/2023(ಎಸ್-ಕೆಎಟಿ) C/W 22229/2022 (ಎಸ್-ಕೆಎಟಿ)ರಲ್ಲಿ ಉಚ್ಚನ್ಯಾಯಾಲಯವು ದಿನಾಂಕ 06.04.2023ರ ತೀರ್ಪಿನಲ್ಲಿ ರಾಜ್ಯ ಸರ್ಕಾರಕ್ಕೆ ಈ ಕೆಳಕಂಡಂತೆ ನಿರ್ದೇಶನಗಳನ್ನು ನೀಡಿರುವುದನ್ನು ಸಭೆಯು ಗಮನಿಸಿತು.

1. The present dispute with regard to reallocation of posts of the officers of the PWD sought to be encadered to the State Accounts Department shall be referred for resolution to the Chief Secretary.
2. The Chief Secretary shall look into the manner and method in which the posts have been created.
3. The Chief Secretary shall look into the desirability for continuation of the posts.
4. In the event, the the Chief Secretary is of the opinion that continuation of the post is required, then the Chief Secretary shall stipulate eligibility criteria and also the duties and responsibilities attached to the respective posts.

5. The Chief Secretary shall also lay down the Guidelines as to how issues of similar nature are to be addressed, if arises in future.
6. The Chief Secretary shall complete the exercise and submit Report to this Court within a period of four months from today.
7. We further direct that in future, creation of all additional posts except which are of permanent nature shall be referred to the Cadre Review Committee and prior consent of the Committee shall be obtained and justify the creation of the post and thereafter, it is open for the respective Departments to seek recruitment and posting.
8. We direct that 1st and 3rd petitioner-Department to place the respective Cadre and Recruitment Rules before the Committee for the purpose of assessing and recommending the necessary staff patten either by way of creating or decreasing the strength in various posts.
9. The order of the Karnataka State Administrative Tribunal Dt: 29.08.2022 passed in Application Nos. 1447-1449/2022 is hereby quashed. The reallocation of post shall take effect immediately after Report of the Chief Secretary and be in accordance with the recommendation of the Chief Secretary.

ಸರ್ಕಾರದ ಕಾರ್ಯದರ್ಶಿ(ಆಯವ್ಯಯ ಮತ್ತು ಸಂಪನ್ಮೂಲ), ಆರ್ಥಿಕ ಇಲಾಖೆ ಇವರು ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯ ರಚನೆಯ ಹಿನ್ನೆಲೆ ಮತ್ತು ಉದ್ದೇಶದ ಬಗ್ಗೆ ಸಭೆಗೆ ವಿವರಿಸಿದರು.

ಪ್ರಧಾನ ನಿರ್ದೇಶಕರು, ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ ಇವರು ಸರ್ಕಾರದ ವಿವಿಧ ಇಲಾಖೆಗಳಲ್ಲಿ ಲೆಕ್ಕಪತ್ರ ನಿರ್ವಹಣೆ ಮತ್ತು ಲೆಕ್ಕಪರಿಶೋಧನೆ ಕಾರ್ಯಗಳನ್ನು ನಿರ್ವಹಿಸುವ ಹುದ್ದೆಗಳನ್ನು ಭರ್ತಿಮಾಡುವ ಕುರಿತು ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ದಿನಾಂಕ: 24/09/2012ರಂದು ನಡೆದ ಸಭೆಯ ತೀರ್ಮಾನದಂತೆ ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 304 ಎಸ್‌ಎಡಿ 2011, ದಿನಾಂಕ 30.10.2012ರಲ್ಲಿ ಈ ಕೆಳಕಂಡಂತೆ ಮಾರ್ಗಸೂಚಿಗಳನ್ನು ಹೊರಡಿಸಲಾಗಿರುವುದನ್ನು ಸಭೆಯ ಗಮನಕ್ಕೆ ತಂದರು.

1. ಸಾಧ್ಯವಾದಷ್ಟು ಅನುಷ್ಠಾನ ಮತ್ತು ಲೆಕ್ಕಪತ್ರ ಕಾರ್ಯಗಳನ್ನು ಪ್ರತ್ಯೇಕವಾಗಿರಿಸುವುದು.
2. ರಾಜ್ಯ ಲೆಕ್ಕಪತ್ರ ಇಲಾಖೆಯು ವಿವಿಧ ಇಲಾಖೆಗಳ ಲೆಕ್ಕಪತ್ರ ಮತ್ತು ಲೆಕ್ಕಪರಿಶೋಧನೆ ಅವಶ್ಯಕತೆಗಳಿಗೆ ಕೌಶಲ್ಯ ಮತ್ತು ಅನುಭವವಿರುವ ಸಿಬ್ಬಂದಿಗಳನ್ನು ಪೂರೈಸುವುದನ್ನು ಮುಂದುವರೆಸುವುದು.
3. ವಿವಿಧ ಇಲಾಖೆಗಳಲ್ಲಿನ ಲೆಕ್ಕಪತ್ರ ಮತ್ತು ಲೆಕ್ಕಪರಿಶೋಧನೆ ಕಾರ್ಯಗಳಿಗೆ ಉನ್ನತ ಮಟ್ಟದ (ಗ್ರೂಪ್ -ಎ ಮತ್ತು ಗ್ರೂಪ್-ಬಿ ಪತ್ರಾಂಕಿತ ಅಧಿಕಾರಿಗಳನ್ನು) ಸಂಪೂರ್ಣವಾಗಿ ರಾಜ್ಯ ಲೆಕ್ಕಪತ್ರ ಇಲಾಖೆಯಿಂದ ಒದಗಿಸುವುದು.
4. ವಿವಿಧ ಇಲಾಖೆಗಳಲ್ಲಿನ ಕೆಳಹಂತದ ಲೆಕ್ಕಪತ್ರ ಮತ್ತು ಲೆಕ್ಕಪರಿಶೋಧನಾ ಸಿಬ್ಬಂದಿಯನ್ನು ಸಹ ಮುಖ್ಯವಾಗಿ ರಾಜ್ಯ ಲೆಕ್ಕಪತ್ರ ಇಲಾಖೆಯಿಂದ ಒದಗಿಸುವುದು.
5. ಲೆಕ್ಕಪತ್ರ ಕಾರ್ಯಗಳಿಗಾಗಿ ಕೆಳಹಂತದ ಹುದ್ದೆಗಳಲ್ಲಿ (ಕಿರಿಯ ಲೆಕ್ಕ ಸಹಾಯಕರು, ಪ್ರಥಮ ದರ್ಜೆ ಲೆಕ್ಕಸಹಾಯಕರು ಮತ್ತು ಲೆಕ್ಕಾಧೀಕ್ಷಕರು) ಸಾಧಾರಣಾವಾಗಿ ವೃಂದ ಬಲದ ಶೇ.50ರಕ್ಕಿಂತ ಹೆಚ್ಚಾಗದಂತೆ ಸಂಬಂಧಪಟ್ಟ ಇಲಾಖೆಗಳಲ್ಲಿ ಕೌಶಲ್ಯ ಮತ್ತು ಅನುಭವ ಹೊಂದಿದ ಸಿಬ್ಬಂದಿಗಳಿಗೆ ಪದೋನ್ನತಿ ನೀಡುವ ಮೂಲಕ ಭರ್ತಿ ಮಾಡಲು ಹುದ್ದೆಗಳನ್ನು ಗುರುತಿಸುವುದು. ಇಂತಹ ಸಿಬ್ಬಂದಿಗೆ ಸ್ಥಗಿತತೆಯೇ ಸಮಸ್ಯೆಯನ್ನು ತಪ್ಪಿಸಲು ಈ ಇಲಾಖೆಗಳು ಲೆಕ್ಕಪತ್ರ ಇಲಾಖೆಗೆ ಸಂಬಂಧಿಸಿದ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡತಕ್ಕದ್ದಲ್ಲ ಹಾಗೂ ಸಂಬಂಧಪಟ್ಟ ಇಲಾಖೆಗಳಿಗೆ ನಿಗಧಿಪಡಿಸಿದ ಪ್ರಮಾಣದಲ್ಲಿ ಹುದ್ದೆಗಳನ್ನು ಗುರುತಿಸುವುದನ್ನು ವೃಂದ ಪರಿಶೀಲನಾ ಸಮಿತಿಯ ಅಧ್ಯಕ್ಷರಾದ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರು ಆರ್ಥಿಕ ಇಲಾಖೆಯ ಸಮಾಲೋಚನೆ ನಂತರ ತೀರ್ಮಾನಿಸುವುದು.

ಮುಂದುವರೆದು, ದಿನಾಂಕ:30.10.2012ರ ಆದೇಶದಲ್ಲಿನ ಮಾರ್ಗಸೂಚಿಗಳಿಗೆ ವ್ಯತಿರಿಕ್ತವಾಗಿ ಲೋಕೋಪಯೋಗಿ ಇಲಾಖೆಯು ಅದರ ವ್ಯಾಪ್ತಿಗೊಳಪಡುವ ಕಚೇರಿ ಹಾಗೂ ನಿಗಮ ಮಂಡಳಿಗಳಲ್ಲಿ ಲೆಕ್ಕಪತ್ರ ಶಾಖೆಯ ಮುಖ್ಯಸ್ಥರಾಗಿ ಹಿರಿಯ ಗ್ರೂಪ್-ಎ ವೃಂದದಲ್ಲಿ ಕಾರ್ಯನಿರ್ವಹಿಸುತ್ತಿರುವ 08 ಹುದ್ದೆಗಳ ಪೈಕಿ ಶೇ.50 ರಷ್ಟು ಅನುಪಾತದನ್ವಯ ಈ ಕೆಳಕಂಡ 04 ಹುದ್ದೆಗಳನ್ನು ಮುಖ್ಯ ಲೆಕ್ಕಾಧಿಕಾರಿ ಹುದ್ದೆಯೆಂದು ಪದನಾಮೀಕರಿಸಿ ಹಾಗೂ ನಿಮ್ನೀಕರಿಸಿ ವೇತನ ಶ್ರೇಣಿ ರೂ.52650-97100 ಲೋಕೋಪಯೋಗಿ ಇಲಾಖೆಯಿಂದ ಭರ್ತಿ ಮಾಡುವ ಹುದ್ದೆಗಳೆಂದು ಗುರುತಿಸಿ ನಿಗದಿಪಡಿಸಿ ಆದೇಶ ಸಂ:ಲೋಇ 112 ಸೇಇಸಿ 2021, ದಿನಾಂಕ 14.03.2022ನ್ನು ಹೊರಡಿಸಿರುವುದನ್ನು ಸಭೆಯ ಗಮನಕ್ಕೆ ತಂದರು.

1. ಮುಖ್ಯ ಇಂಜಿನೀಯರ್‌ರವರ ಕಚೇರಿ, ಸಂಪರ್ಕ ಮತ್ತು ಕಟ್ಟಡಗಳು (ದಕ್ಷಿಣ), ಬೆಂಗಳೂರು
2. ಮುಖ್ಯ ಇಂಜಿನೀಯರ್‌ರವರ ಕಚೇರಿ, ಸಂಪರ್ಕ ಮತ್ತು ಕಟ್ಟಡಗಳು (ಈಶಾನ್ಯ), ಕಲಬುರಗಿ
3. ಮುಖ್ಯ ಯೋಜನಾಧಿಕಾರಿಗಳ ಕಚೇರಿ, ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ (SHDP), ಬೆಂಗಳೂರು
4. ವ್ಯವಸ್ಥಾಪಕ ನಿರ್ದೇಶಕರ ಕಚೇರಿ, ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ (KRDCL), ಬೆಂಗಳೂರು

ಲೋಕೋಪಯೋಗಿ ಇಲಾಖೆಯು ಹುದ್ದೆಗಳನ್ನು ಗುರುತಿಸಿ ಹೊರಡಿಸಿರುವ ಮೇಲ್ಕಂಡ ಆದೇಶದಲ್ಲಿ ಆರ್ಥಿಕ ಇಲಾಖೆಯು ನೀಡಿರುವ ಸಹಮತಿಯನ್ವಯ ಎಂದು ತಿಳಿಸಲಾಗಿದ್ದು, ಪ್ರಸ್ತಾವನೆಗೆ ಆರ್ಥಿಕ ಇಲಾಖೆಯು ಸಹಮತಿಸಿಲ್ಲದಿರುವ ಅಂಶವನ್ನು ಸಭೆಯು ಗಮನಿಸಿತು.

ಮಾನ್ಯ ಉಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂ: 2262/2023(ಎಸ್-ಕೆಎಟಿ), c/w 22229/2022 (ಎಸ್.ಕೆ.ಎ.ಟಿ) ರಲ್ಲಿ ದಿನಾಂಕ:06.04.2023ರಂದು ನೀಡಿರುವ ತೀರ್ಪಿನಲ್ಲಿನ ನಿರ್ದೇಶನಗಳನ್ವಯ ಪ್ರಕರಣವನ್ನು ಕೂಲಂಕುಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ನಿರ್ದೇಶನ ನೀಡಲಾಯಿತು.

1. ಈಗಾಗಲೇ ಹೊರಡಿಸಿರುವ, ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 304 ಎಸ್‌ಎಡಿ 2011, ದಿನಾಂಕ 30.10.2012ರಲ್ಲಿನ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲಿಸಲು ಸೂಚಿಸಲಾಯಿತು. (ಕ್ರಮ:ಎಲ್ಲಾ ಇಲಾಖೆಗಳ ಅಪರ ಮುಖ್ಯ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿ)
2. ದಿನಾಂಕ:14.03.2022ರಂದು ಹೊರಡಿಸಿದ ಕಾರ್ಯಕಾರಿ ಆದೇಶ ಸಂಖ್ಯೆ: ಲೋಇ 112 ಸೇಇಸಿ 2021ನ್ನು ತಕ್ಷಣವೇ ಹಿಂಪಡೆಯಲು ಸರ್ಕಾರದ ಲೋಕೋಪಯೋಗಿ ಇಲಾಖೆಗೆ ಸೂಚಿಸಲಾಯಿತು. (ಕ್ರಮ: ಸರ್ಕಾರದ ಪ್ರಧಾನ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ)
3. ಆರ್ಥಿಕ ಇಲಾಖೆಯು ಸಹಮತಿ ನೀಡದೇ ಇದ್ದರೂ, ಸಹಮತಿ ನೀಡಲಾಗಿದೆ ಎಂದು ನಮೂದಿಸಿ, ದಿನಾಂಕ:14/03/2022ರ ಕಾರ್ಯಕಾರಿ ಆದೇಶ ಹೊರಡಿಸಲು ಕಾರಣರಾದ ಲೋಕೋಪಯೋಗಿ ಇಲಾಖೆಯ ಅಧಿಕಾರಿ/ಸಿಬ್ಬಂದಿಗಳ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲು ಸೂಚಿಸಲಾಯಿತು.(ಕ್ರಮ ಸರ್ಕಾರದ ಪ್ರಧಾನ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ/ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ)
4. ಗ್ರೂಪ್-ಎ ಮತ್ತು ಗ್ರೂಪ್-ಬಿ ವೃಂದದ ಲೆಕ್ಕಪತ್ರದ ಶಾಖೆಗಳಿಗೆ ಸಂಬಂಧಿಸಿದ ಹುದ್ದೆಗಳನ್ನು ದಿನಾಂಕ:30.10.2012ರ ಮಾರ್ಗಸೂಚಿಗಳಲ್ಲಿ ತಿಳಿಸಿರುವಂತೆ ಸಂಪೂರ್ಣವಾಗಿ ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯಿಂದಲೇ ಭರ್ತಿ ಮಾಡತಕ್ಕದ್ದು.(ಕ್ರಮ: ಪ್ರಧಾನ ನಿರ್ದೇಶಕರು, ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ)
5. ಅನುಷ್ಠಾನ ಮತ್ತು ಲೆಕ್ಕಪತ್ರ ಕಾರ್ಯಗಳನ್ನು ಪ್ರತ್ಯೇಕವಾಗಿರಿಸುವ ಸಲುವಾಗಿ ಲೆಕ್ಕಪತ್ರ ಮತ್ತು ಲೆಕ್ಕಪರಿಶೋಧನೆಗೆ ಸಂಬಂಧಿಸಿದ ಕೆಳವೃಂದದ ಹುದ್ದೆಗಳನ್ನೂ ಸಹ ಸಾಧ್ಯವಾದಷ್ಟು ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯ ಸಿಬ್ಬಂದಿಗಳಿಂದ ಭರ್ತಿಮಾಡುವುದು

6. ದಿನಾಂಕ: 30.10.2012ರ ಮಾರ್ಗಸೂಚಿಗಳನ್ನು ಉಲ್ಲಂಘಿಸಿ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಈಗಾಗಲೇ ರಚಿಸಿದ್ದಲ್ಲಿ ಅಥವಾ ಕಾರ್ಯಕಾರಿ ಆದೇಶ ಹೊರಡಿಸಿದ್ದಲ್ಲಿ, ಅವುಗಳನ್ನು ಸೂಕ್ತವಾಗಿ ತಿದ್ದುಪಡಿ ಮಾಡಲು /ಹಿಂಪಡೆಯಲು ಕ್ರಮ ಕೈಗೊಳ್ಳತಕ್ಕದ್ದು. (ಕ್ರಮ:ಎಲ್ಲಾ ಇಲಾಖೆಗಳ ಅಪರ ಮುಖ್ಯ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿ
7. ಲೆಕ್ಕಪತ್ರ ಮತ್ತು ಲೆಕ್ಕಪರಿಶೋಧನೆ ಸೇವೆಗೆ ಸಂಬಂಧಿಸಿದ ಹುದ್ದೆಗಳ ನೇರ ನೇಮಕಾತಿಯನ್ನು ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಇಲಾಖೆಯ ಮೂಲಕ ಭರ್ತಿ ಮಾಡಿ ವಿವಿಧ ಇಲಾಖೆಗಳಿಗೆ ಪೂರೈಸುವುದು ಹಾಗೂ ಯಾವುದೇ ಇಲಾಖೆಗಳು ಲೆಕ್ಕಪತ್ರ ಸೇವೆಗೆ ಸಂಬಂಧಿಸಿದ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿಮಾಡತಕ್ಕದ್ದಲ್ಲ. (ಕ್ರಮ:ಎಲ್ಲಾ ಇಲಾಖೆಗಳ ಅಪರ ಮುಖ್ಯ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿ ಹಾಗೂ ಪ್ರಧಾನ ನಿರ್ದೇಶಕರು, ಕರಾಲಲಪ ಇಲಾಖೆ)
8. ಇನ್ನು ಮುಂದೆ ಯಾವುದೇ ಲೆಕ್ಕಪತ್ರ ಶಾಖೆಗೆ ಸಂಬಂಧಿಸಿದ ಗ್ರೂಪ್-ಎ ಮತ್ತು ಬಿ ವೃಂದದ ಹುದ್ದೆಗಳನ್ನು ಹೊರತುಪಡಿಸಿ ಇತರೆ ಹುದ್ದೆಗಳನ್ನು ತುಂಬುವುದಿದ್ದಲ್ಲಿ ದಿನಾಂಕ: 30.10.2012ರ ಮಾರ್ಗಸೂಚಿಗಳ (e) ರನ್ವಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ರಚಿಸಲಾದ ವೃಂದ ಪರಿಶೀಲನಾ ಸಮಿತಿಯ ಮುಂದೆ ಮಂಡಿಸಿ ಅನುಮೋದನೆ ಪಡೆದು ಕ್ರಮ ಕೈಗೊಳ್ಳತಕ್ಕದ್ದು. (ಕ್ರಮ:ಎಲ್ಲಾ ಇಲಾಖೆಗಳ ಅಪರ ಮುಖ್ಯ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿ)
9. ಈ ಬಗ್ಗೆ ಯಾವುದೇ ವ್ಯತ್ಯಾಸಗಳಿದ್ದಲ್ಲಿ ಸಂಬಂಧಿಸಿದ ಇಲಾಖೆಗಳು, ಸರ್ಕಾರದ ಕಾರ್ಯದರ್ಶಿಯವರು (ಆಯವ್ಯಯ ಮತ್ತು ಸಂಪನ್ಮೂಲ), ಆರ್ಥಿಕ ಇಲಾಖೆ ಇವರೊಂದಿಗೆ ಸಮಾಲೋಚಿಸಿ ಇತ್ಯರ್ಥಪಡಿಸತಕ್ಕದ್ದು. (ಕ್ರಮ:ಎಲ್ಲಾ ಇಲಾಖೆಗಳ ಅಪರ ಮುಖ್ಯ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿ)
10. ಮೇಲ್ಕಂಡ ಎಲ್ಲಾ ಕ್ರಮಗಳನ್ನು ಸಂಬಂಧಪಟ್ಟ ಇಲಾಖೆಗಳು ಮೂರು ತಿಂಗಳೊಳಗಾಗಿ ಪೂರ್ಣಗೊಳಿಸಿ ಅನುಸರಣಾ ವರದಿಯನ್ನು ಸರ್ಕಾರದ ಕಾರ್ಯದರ್ಶಿ, ಆರ್ಥಿಕ ಇಲಾಖೆ(ಆಯವ್ಯಯ ಮತ್ತು ಸಂಪನ್ಮೂಲ) ಇವರ ಮೂಲಕ ಸಲ್ಲಿಸುವುದು.

ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

**(ವಂದಿತಾ ಶರ್ಮಾ)**

**ಸರ್ಕಾರದ ಮುಖ್ಯ ಕಾರ್ಯದರ್ಶಿಗಳು**

ಸಂ: ಆಇ 216 ರಾಲೆಪ 2023

ಅನು-೨೦೬-5

<u>ಕರ್ನಾಟಕ ಸರ್ಕಾರದ ನಡವಳಿಗಳು</u>

ವಿಷಯ: ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯಿಂದ ನಿಯೋಜನೆ ಮೇರೆಗೆ ಮೀಸಲಿರಿಸಿದ ಹುದ್ದೆಗಳನ್ನು ಹಂಚಿಕೆ ಮಾಡುವಲ್ಲಿ ಉಂಟಾಗಿರುವ ತೊಡಕುಗಳನ್ನು ನಿವಾರಿಸುವ ಬಗ್ಗೆ.

ಓದಲಾಗಿದೆ:
1. ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 304 ಎಸ್‌ಎಡಿ 2011, ದಿನಾಂಕ 30.10.2012
2. ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ದಿನಾಂಕ:21.07.2023 ರಂದು ನಡೆದ ಸಭೆಯ ನಡವಳಿ.

* * *

**ಪ್ರಸ್ತಾವನೆ:**

ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯಿಂದ ನಿಯೋಜನೆ ಮೇಲೆ ನಿಯೋಜಿಸುವ ಕುರಿತು ಸರ್ಕಾರದ ಆದೇಶ ಸಂಖ್ಯೆ: ಆಇ 304 ಎಸ್.ಎ.ಡಿ 2011, ದಿನಾಂಕ:30.10.2012 ರನ್ವಯ ಮಾರ್ಗಸೂಚಿಗಳನ್ನು ಹೊರಡಿಸಲಾಗಿದೆ. ದಿನಾಂಕ:30.10.2012 ರ ಆದೇಶದಲ್ಲಿನ ಮಾರ್ಗಸೂಚಿಗಳಿಗೆ ವ್ಯತಿರಿಕ್ತವಾಗಿ ಲೋಕೋಪಯೋಗಿ ಇಲಾಖೆಯು ಅದರ ವ್ಯಾಪ್ತಿಗೊಳಪಡುವ ಕಚೇರಿ ಹಾಗೂ ನಿಗಮ ಮಂಡಳಿಗಳಲ್ಲಿ ಲೆಕ್ಕಪತ್ರ ಶಾಖೆಯ ಮುಖ್ಯಸ್ಥರಾಗಿ ಹಿರಿಯ ಗ್ರೂಪ್-ಎ ವೃಂದದಲ್ಲಿ ಕಾರ್ಯನಿರ್ವಹಿಸುತ್ತಿರುವ 08 ಹುದ್ದೆಗಳ ಪೈಕಿ ಶೇ.50 ರಷ್ಟು ಅನುಪಾತದನ್ವಯ 04 ಹುದ್ದೆಗಳನ್ನು ಮುಖ್ಯ ಲೆಕ್ಕಾಧಿಕಾರಿ ಹುದ್ದೆಯೆಂದು ಪದನಾಮೀಕರಿಸಿ ಹಾಗೂ ನಿಮ್ನೀಕರಿಸಿ ವೇತನ ಶ್ರೇಣಿ ರೂ.52650-97100 ಲೋಕೋಪಯೋಗಿ ಇಲಾಖೆಯಿಂದ ಭರ್ತಿ ಮಾಡುವ ಹುದ್ದೆಗಳೆಂದು ಗುರುತಿಸಿ ನಿಗದಿಪಡಿಸಿ ಆದೇಶ ಸಂ:ಲೋಇ 112 ಸೇಇಸಿ 2021, ದಿನಾಂಕ 14.03.2022ನ್ನು ಹೊರಡಿಸಿರುತ್ತದೆ, ಈ ಆದೇಶವನ್ನು ಪ್ರಶ್ನಿಸಿ, ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯ ಅಧಿಕಾರಿಗಳು ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯಲ್ಲಿ ಸಲ್ಲಿಸಿದ ಅರ್ಜಿ ಸಂಖ್ಯೆ:1447-49/2022 ರಲ್ಲಿ ದಿನಾಂಕ 29.08.2022 ರಂದು ನೀಡಿರುವ ಆದೇಶದಲ್ಲಿ ಲೋಕೋಪಯೋಗಿ ಇಲಾಖೆಯ ಕಾರ್ಯಕಾರಿ ಆದೇಶವನ್ನು ರದ್ದುಪಡಿಸಿರುತ್ತದೆ. ಲೋಕೋಪಯೋಗಿ ಇಲಾಖೆಯು ದಿನಾಂಕ 29.08.2022 ರ ತೀರ್ಪನ್ನು ಪ್ರಶ್ನಿಸಿ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಪಿಟಿಷನ್ ಸಂಖ್ಯೆ:2262/2023(ಎಸ್-ಕೆಎಟಿ) C/W 22229/2022 (ಎಸ್-ಕೆಎಟಿ) ರಲ್ಲಿ ಉಚ್ಚ ನ್ಯಾಯಾಲಯವು ದಿನಾಂಕ 06.04.2023ರ ತೀರ್ಪಿನಲ್ಲಿ ರಾಜ್ಯ ಸರ್ಕಾರಕ್ಕೆ ಈ ಕೆಳಕಂಡಂತೆ ನಿರ್ದೇಶನಗಳನ್ನು ನೀಡಿರುತ್ತದೆ.

The present dispute with regard to reallocation of posts of the officers of the PWD sought to be encadered to the State Accounts Department shall be referred for resolution to the Chief Secretary.

1. The Chief Secretary shall look into the manner and method in which the posts have been created.
2. The Chief Secretary shall look into the desirability for continuation of the posts.
3. In the event, the the Chief Secretary is of the opinion that continuation of the post is required, then the Chief Secretary shall stipulate eligibility criteria and also the duties and responsibilities attached to the respective posts.
4. The Chief Secretary shall also lay down the Guidelines as to how issues of similar nature are to be addressed, if arises in future.
5. The Chief Secretary shall complete the exercise and submit Report to this Court within a period of four months from today.
6. We further direct that in future, creation of all additional posts except which are of permanent nature shall be referred to the Cadre Review Committee and prior consent of the Committee shall be obtained and justify the creation of the post and thereafter, it is open for the respective Departments to seek recruitment and posting.

7. We direct that 1st and 3rd petitioner-Department to place the respective Cadre and Recruitment Rules before the Committee for the purpose of assessing and recommending the necessary staff pattern either by way of creating or decreasing the strength in various posts.
8. The order of the Karnataka State Administrative Tribunal Dt: 29.08.2022 passed in Application Nos. 1447-1449/2022 is hereby quashed. The reallocation of post shall take effect immediately after Report of the Chief Secretary and be in accordance with the recommendation of the Chief Secretary.

ಮೇಲ್ಕಂಡ ತೀರ್ಪಿನಲ್ಲಿ ಮಾನ್ಯ ನ್ಯಾಯಾಲಯವು ನೀಡಿರುವ ನಿರ್ದೇಶನಗಳಂತೆ ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ದಿನಾಂಕ:21.07.2023 ಸಭೆಯು ಜರುಗಿದ್ದು, ಸದರಿ ಸಭೆಯಲ್ಲಿ ಆರ್ಥಿಕ ಇಲಾಖೆಯಿಂದ/ರಾಜ್ಯಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯಿಂದ ಅಧಿಕಾರಿಗಳನ್ನು ನಿಯೋಜನೆ ಮೇರೆಗೆ ತುಂಬುವ ಸಂಬಂಧ ಸರ್ಕಾರದ ಎಲ್ಲಾ ಇಲಾಖೆಗಳಿಗೆ ನಿರ್ದೇಶನಗಳನ್ನು ನೀಡಲಾಗಿರುತ್ತದೆ.

ಮೇಲೆ ಓದಲಾದ ಕ್ರ.ಸಂ.(1)ರ ಆದೇಶದಲ್ಲಿ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಲೆಕ್ಕಪತ್ರ ನಿರ್ವಹಣೆ ಮತ್ತು ಲೆಕ್ಕಪರಿಶೋಧನೆ ಕಾರ್ಯಗಳನ್ನು ನಿರ್ವಹಿಸುವ ಹುದ್ದೆಗಳನ್ನು ಭರ್ತಿಮಾಡುವ ಕುರಿತು ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 304 ಎಸ್‌ಎಡಿ 2011, ದಿನಾಂಕ 30.10.2012ರಲ್ಲಿ ಈ ಕೆಳಕಂಡಂತೆ ಮಾರ್ಗಸೂಚಿಗಳನ್ನು ಹೊರಡಿಸಲಾಗಿದೆ.

a. ಸಾಧ್ಯವಾದಷ್ಟು ಅನುಷ್ಠಾನ ಮತ್ತು ಲೆಕ್ಕಪತ್ರ ಕಾರ್ಯಗಳನ್ನು ಪ್ರತ್ಯೇಕವಾಗಿರಿಸುವುದು.
b. ರಾಜ್ಯ ಲೆಕ್ಕಪತ್ರ ಇಲಾಖೆಯು ವಿವಿಧ ಇಲಾಖೆಗಳ ಲೆಕ್ಕಪತ್ರ ಮತ್ತು ಲೆಕ್ಕಪರಿಶೋಧನೆ ಅವಶ್ಯಕತೆಗಳಿಗೆ ಕೌಶಲ್ಯ ಮತ್ತು ಅನುಭವವಿರುವ ಸಿಬ್ಬಂದಿಗಳನ್ನು ಪೂರೈಸುವುದನ್ನು ಮುಂದುವರೆಸುವುದು.
c. ವಿವಿಧ ಇಲಾಖೆಗಳಲ್ಲಿನ ಲೆಕ್ಕಪತ್ರ ಮತ್ತು ಲೆಕ್ಕಪರಿಶೋಧನೆ ಕಾರ್ಯಗಳಿಗೆ ಉನ್ನತ ಮಟ್ಟದ (ಗ್ರೂಪ್ - ಎ ಮತ್ತು ಗ್ರೂಪ್-ಬಿ ಪತ್ರಾಂಕಿತ ಅಧಿಕಾರಿಗಳನ್ನು) ಸಂಪೂರ್ಣವಾಗಿ ರಾಜ್ಯ ಲೆಕ್ಕಪತ್ರ ಇಲಾಖೆಯಿಂದ ಒದಗಿಸುವುದು.
d. ವಿವಿಧ ಇಲಾಖೆಗಳಲ್ಲಿನ ಕೆಳಹಂತದ ಲೆಕ್ಕಪತ್ರ ಮತ್ತು ಲೆಕ್ಕಪರಿಶೋಧನಾ ಸಿಬ್ಬಂದಿಯನ್ನು ಸಹ ಮುಖ್ಯವಾಗಿ ರಾಜ್ಯ ಲೆಕ್ಕಪತ್ರ ಇಲಾಖೆಯಿಂದ ಒದಗಿಸುವುದು.
e. ಲೆಕ್ಕಪತ್ರ ಕಾರ್ಯಗಳಿಗಾಗಿ ಕೆಳಹಂತದ ಹುದ್ದೆಗಳಲ್ಲಿ (ಕಿರಿಯ ಲೆಕ್ಕ ಸಹಾಯಕರು, ಪ್ರಥಮ ದರ್ಜೆ ಲೆಕ್ಕಸಹಾಯಕರು ಮತ್ತು ಲೆಕ್ಕಾಧೀಕ್ಷಕರು) ಸಾಧಾರಣವಾಗಿ ವೃಂದ ಬಲದ ಶೇ.50ರಕ್ಕಿಂತ ಹೆಚ್ಚಾಗದಂತೆ ಸಂಬಂಧಪಟ್ಟ ಇಲಾಖೆಗಳಲ್ಲಿ ಕೌಶಲ್ಯ ಮತ್ತು ಅನುಭವ ಹೊಂದಿದ ಸಿಬ್ಬಂದಿಗಳಿಗೆ ಪದೋನ್ನತಿ ನೀಡುವ ಮೂಲಕ ಭರ್ತಿ ಮಾಡಲು ಹುದ್ದೆಗಳನ್ನು ಗುರುತಿಸುವುದು. ಇಂತಹ ಸಿಬ್ಬಂದಿಗೆ ಸ್ಥಗಿತತೆಯೇ ಸಮಸ್ಯೆಯನ್ನು ತಪ್ಪಿಸಲು ಈ ಇಲಾಖೆಗಳು ಲೆಕ್ಕಪತ್ರ ಇಲಾಖೆಗೆ ಸಂಬಂಧಿಸಿದ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡತಕ್ಕದ್ದಲ್ಲ ಹಾಗೂ ಸಂಬಂಧಪಟ್ಟ ಇಲಾಖೆಗಳಿಗೆ ನಿಗದಿಪಡಿಸಿದ ಪ್ರಮಾಣದಲ್ಲಿ ಹುದ್ದೆಗಳನ್ನು ಗುರುತಿಸುವುದನ್ನು ವೃಂದ ಪರಿಶೀಲನಾ ಸಮಿತಿಯ ಅಧ್ಯಕ್ಷರಾದ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರು ಆರ್ಥಿಕ ಇಲಾಖೆಯ ಸಮಾಲೋಚನೆ ನಂತರ ತೀರ್ಮಾನಿಸುವುದು.

ಈ ಮಾರ್ಗಸೂಚಿಗಳ ಕುರಿತು ಅಂಶಗಳನ್ನು ದಿನಾಂಕ:21/07/2023 ರಂದು ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಚರ್ಚಿಸಲಾಯಿತು. ಅದರಂತೆ, ಮೇಲೆ ಓದಲಾದ ಕ್ರ.ಸಂ. (2) ರಲ್ಲಿ ಮಾನ್ಯ ಉಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂ: 2262/2023(ಎಸ್-ಕೆಎಟಿ), c/w 22229/2022 (ಎಸ್.ಕೆ.ಎ.ಟಿ) ರಲ್ಲಿ ದಿನಾಂಕ:06.04.2023 ರಂದು ನೀಡಿರುವ ತೀರ್ಪಿನಲ್ಲಿನ ನಿರ್ದೇಶನದನ್ವಯ ಮತ್ತು ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ನಡೆದ ದಿನಾಂಕ:21.07.2023ರ ಸಭೆಯಲ್ಲಿ ಕೈಗೊಂಡ ತೀರ್ಮಾನದನ್ವಯ ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯಿಂದ ನಿಯೋಜನೆಗೆ ಮೀಸಲಿರಿಸಿದ ಹುದ್ದೆಗಳನ್ನು ಹಂಚಿಕೆ ಮಾಡುವಲ್ಲಿನ ತೊಡಕುಗಳನ್ನು ನಿವಾರಿಸುವ ಕುರಿತು ನಡೆದ ಸಭೆಯ ತೀರ್ಮಾನದಂತೆ, ಈ ಕೆಳಕಂಡ ಆದೇಶ ಹೊರಡಿಸಿದೆ.

**ಸರ್ಕಾರದ ಆದೇಶ ಸಂಖ್ಯೆ:ಆಇ 216 ರಾಲೆಪ 2023, ಬೆಂಗಳೂರು, ದಿನಾಂಕ: 15.09.2023.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಸರ್ಕಾರದ ವಿವಿಧ ಇಲಾಖೆಗಳಲ್ಲಿ ಲೆಕ್ಕಪತ್ರ ನಿರ್ವಹಣೆ ಮತ್ತು ಲೆಕ್ಕಪರಿಶೋಧನೆ ಕಾರ್ಯಗಳನ್ನು ನಿರ್ವಹಿಸಲು ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯಿಂದ ನಿಯೋಜನ ಮೇರೆಗೆ ಮೀಸಲಿರಿಸಿದ ಹುದ್ದೆಗಳನ್ನು ಭರ್ತಿ ಮಾಡುವ ಈ ಕೆಳಕಂಡಂತೆ ಆದೇಶಿಸಿದೆ.

1. ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 304 ಎಸ್‌ಎಡಿ 2011, ದಿನಾಂಕ 30.10.2012ರಲ್ಲಿನ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲಿಸುವುದು.
2. ಲೋಕೋಪಯೋಗಿ ಇಲಾಖೆಯು ದಿನಾಂಕ:14.03.2022ರಂದು ಹೊರಡಿಸಿದ ಕಾರ್ಯಕಾರಿ ಆದೇಶ ಸಂಖ್ಯೆ: ಲೋಇ 112 ಸೇಇಸಿ 2021ನ್ನು ತಕ್ಷಣವೇ ಹಿಂಪಡೆಯುವುದು.
3. ಆರ್ಥಿಕ ಇಲಾಖೆಯು ಸಹಮತಿ ನೀಡದೇ ಇದ್ದರೂ, ಸಹಮತಿ ನೀಡಲಾಗಿದೆ ಎಂದು ನಮೂದಿಸಿ, ದಿನಾಂಕ:14.03.2022ರ ಕಾರ್ಯಕಾರಿ ಆದೇಶ ಹೊರಡಿಸಲು ಕಾರಣರಾದ ಲೋಕೋಪಯೋಗಿ ಇಲಾಖೆಯ ಅಧಿಕಾರಿ/ಸಿಬ್ಬಂದಿಗಳ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳುವುದು.
4. ಗ್ರೂಪ್-ಎ ಮತ್ತು ಗ್ರೂಪ್-ಬಿ ವೃಂದದ ಲೆಕ್ಕಪತ್ರದ ಶಾಖೆಗಳಿಗೆ ಸಂಬಂಧಿಸಿದ ಹುದ್ದೆಗಳನ್ನು ದಿನಾಂಕ:30.10.2012ರ ಮಾರ್ಗಸೂಚಿಗಳಲ್ಲಿ ತಿಳಿಸಿರುವಂತೆ ಸಂಪೂರ್ಣವಾಗಿ ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯಿಂದಲೇ ಭರ್ತಿ ಮಾಡುವುದು.
5. ಅನುಷ್ಠಾನ ಮತ್ತು ಲೆಕ್ಕಪತ್ರ ಕಾರ್ಯಗಳನ್ನು ಪ್ರತ್ಯೇಕವಾಗಿರಿಸುವ ಸಲುವಾಗಿ ಲೆಕ್ಕಪತ್ರ ಮತ್ತು ಲೆಕ್ಕಪರಿಶೋಧನೆಗೆ ಸಂಬಂಧಿಸಿದ ಕೆಳವೃಂದದ ಹುದ್ದೆಗಳನ್ನೂ ಸಹ ಸಾಧ್ಯವಾದಷ್ಟು ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯ ಸಿಬ್ಬಂದಿಗಳಿಂದ ಭರ್ತಿ ಮಾಡುವುದು.
6. ದಿನಾಂಕ: 30.10.2012ರ ಮಾರ್ಗಸೂಚಿಗಳನ್ನು ಉಲ್ಲಂಘಿಸಿ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಈಗಾಗಲೇ ರಚಿಸಿದ್ದಲ್ಲಿ ಅಥವಾ ಕಾರ್ಯಕಾರಿ ಆದೇಶ ಹೊರಡಿಸಿದ್ದಲ್ಲಿ, ಅವುಗಳನ್ನು ಸೂಕ್ತವಾಗಿ ತಿದ್ದುಪಡಿ ಮಾಡಲು /ಹಿಂಪಡೆಯಲು ಕ್ರಮ ಕೈಗೊಳ್ಳತಕ್ಕದ್ದು.
7. ಲೆಕ್ಕಪತ್ರ ಮತ್ತು ಲೆಕ್ಕಪರಿಶೋಧನೆ ಸೇವೆಗೆ ಸಂಬಂಧಿಸಿದ ಹುದ್ದೆಗಳ ನೇರ ನೇಮಕಾತಿಯನ್ನು ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಇಲಾಖೆಯ ಮೂಲಕ ಭರ್ತಿ ಮಾಡಿ ವಿವಿಧ ಇಲಾಖೆಗಳಿಗೆ ಪೂರೈಸುವುದು ಹಾಗೂ ಯಾವುದೇ ಇಲಾಖೆಗಳು ಲೆಕ್ಕಪತ್ರ ಸೇವೆಗೆ ಸಂಬಂಧಿಸಿದ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿಮಾಡತಕ್ಕದ್ದಲ್ಲ.
8. ಇನ್ನು ಮುಂದೆ ಯಾವುದೇ ಲೆಕ್ಕಪತ್ರ ಶಾಖೆಗೆ ಸಂಬಂಧಿಸಿದ ಗ್ರೂಪ್-ಎ ಮತ್ತು ಬಿ ವೃಂದದ ಹುದ್ದೆಗಳನ್ನು ಹೊರತುಪಡಿಸಿ ಇತರೆ ಹುದ್ದೆಗಳನ್ನು ತುಂಬುವುದಿದ್ದಲ್ಲಿ ದಿನಾಂಕ: 30.10.2012ರ ಮಾರ್ಗಸೂಚಿಗಳ (೮) ರನ್ವಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ರಚಿಸಲಾದ ವೃಂದ ಪರಿಶೀಲನಾ ಸಮಿತಿಯ ಮುಂದೆ ಮಂಡಿಸಿ ಅನುಮೋದನೆ ಪಡೆದು ಕ್ರಮ ಕೈಗೊಳ್ಳತಕ್ಕದ್ದು.
9. ಈ ಬಗ್ಗೆ ಯಾವುದೇ ವ್ಯತ್ಯಾಸಗಳಿದ್ದಲ್ಲಿ ಸಂಬಂಧಿಸಿದ ಇಲಾಖೆಗಳು, ಸರ್ಕಾರದ ಕಾರ್ಯದರ್ಶಿಯವರು (ಆಯವ್ಯಯ ಮತ್ತು ಸಂಪನ್ಮೂಲ), ಆರ್ಥಿಕ ಇಲಾಖೆ ಇವರೊಂದಿಗೆ ಸಮಾಲೋಚಿಸಿ ಇತ್ಯರ್ಥಪಡಿಸತಕ್ಕದ್ದು.
10. ಮೇಲ್ಕಂಡ ಎಲ್ಲಾ ಕ್ರಮಗಳನ್ನು ಸಂಬಂಧಪಟ್ಟ ಇಲಾಖೆಗಳು ಮೂರು ತಿಂಗಳೊಳಗಾಗಿ ಪೂರ್ಣಗೊಳಿಸಿ ಅನುಸರಣಾ ವರದಿಯನ್ನು ಸರ್ಕಾರದ ಕಾರ್ಯದರ್ಶಿ, ಆರ್ಥಿಕ ಇಲಾಖೆ (ಆಯವ್ಯಯ ಮತ್ತು ಸಂಪನ್ಮೂಲ) ಇವರ ಮೂಲಕ ಸಲ್ಲಿಸುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ನೇತ್ರಪ್ರಭಾ ಎಂ. ಧಾಯಪುಲೆ)
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ಆಡಳಿತ & ಮುಂಗಡಗಳು)

ಇವರಿಗೆ:

1. ಪ್ರಧಾನ ಮಹಾಲೇಖಪಾಲರು, (ಎ & ಇ) (ಜಿ & ಎಸ್‌ಎಸ್‌ಎ) 1&2, ಕರ್ನಾಟಕ, ಬೆಂಗಳೂರು.

2. ಸರ್ಕಾರದ ಮುಖ್ಯ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
3. ಅಡ್ವಕೇಟ್ ಜನರಲ್, ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು.
4. ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು/ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು, ಬೆಂಗಳೂರು.
5. ಎಲ್ಲಾ ಇಲಾಖಾ ಮುಖ್ಯಸ್ಥರುಗಳು.
6. ಕಾರ್ಯದರ್ಶಿ, ಕರ್ನಾಟಕ ಲೋಕ ಸೇವಾ ಆಯೋಗ, ಉದ್ಯೋಗ ಸೌಧ, ಬೆಂಗಳೂರು.
7. ಪ್ರಧಾನ ನಿರ್ದೇಶಕರು, ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ, ಶಾಂತಿನಗರ, ಬೆಂಗಳೂರು.
8. ಸರ್ಕಾರದ ಅಪರ ಕಾರ್ಯದರ್ಶಿಗಳು, ಸಿಆಸು ಇಲಾಖೆ (ಸೇವಾ ನಿಯಮಗಳು), ಬೆಂಗಳೂರು.
9. ಸರ್ಕಾರದ ಅಪರ/ಜಂಟಿ/ಉಪ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
10. ಶಾಖಾ ರಕ್ಷಾ ಕಡತ/ ಹೆಚ್ಚುವರಿ ಪ್ರತಿ.

# ಕರ್ನಾಟಕ ಸರ್ಕಾರ

ಸಂಖ್ಯೆ: ಆಇ/430/ರಾಲೆಪ/2023

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು, ದಿನಾಂಕ: 04.03.2025.

ಇವರಿಂದ,
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಆರ್ಥಿಕ ಇಲಾಖೆ,
ವಿಧಾನ ಸೌಧ,
ಬೆಂಗಳೂರು-560 001.

ಪ್ರಧಾನ ನಿರ್ದೇಶಕರ ಆಪ್ತಶಾಖೆ
ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು
ಲೆಕ್ಕಪತ್ರ ಇಲಾಖೆ, ಬೆಂಗಳೂರು
05 MAR 2025
ಪ್ರಧಾನ ನಿರ್ದೇಶಕರು

ಇವರಿಗೆ:
ಪ್ರಧಾನ ನಿರ್ದೇಶಕರು
ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ
ಮತ್ತು ಲೆಕ್ಕಪತ್ರ ಇಲಾಖೆ,
ಶಾಂತಿನಗರ,
ಬೆಂಗಳೂರು.

ಮಾನ್ಯರೆ,

ವಿಷಯ: ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯ ಗ್ರೂಪ್-'ಎ', 'ಬಿ' ಹಾಗೂ 'ಸಿ' ವೃಂದದ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಅನುಮತಿ ನೀಡುವ ಕುರಿತು.

ಉಲ್ಲೇಖ: ತಮ್ಮ ಪತ್ರ ಸಂಖ್ಯೆ: ಸಿಎಸ್ಎ 1 ಎಸ್‌ಪಿಎಫ 2021, ದಿನಾಂಕ: 16.11.2025.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯಲ್ಲಿ ಮಂಜೂರಾಗಿ ಖಾಲಿ ಇರುವ ಹುದ್ದೆಗಳಿಗೆದುರಾಗಿ ಈ ಕೆಳಕಂಡಂತೆ 110-ವಿವಿಧ ವೃಂದದ ಹುದ್ದೆಗಳನ್ನು ನೇರ ನೇಮಕಾತಿ ಮುಖಾಂತರ ಭರ್ತಿ ಮಾಡಿಕೊಳ್ಳಲು ಸಹಮತಿ ನೀಡಲಾಗಿದೆ.

| ಕ್ರ. ಸಂ. | ಹುದ್ದೆಯ ಪದನಾಮ | ಆರ್ಥಿಕ ಇಲಾಖೆಯು ಭರ್ತಿ ಮಾಡಿಕೊಳ್ಳಲು ಸಹಮಿತಿಸಿದ ಹುದ್ದೆಗಳ ಸಂಖ್ಯೆ |
|---|---|---|
| 1 | Assistant Controller | 15 |
| 2 | Audit Officers | 15 |
| 3 | Accounts Assistants | 50 |
| 4 | Junior Accounts Assistants | 30 |
| | Total | 110 |

ಮುಂದುವರೆದು, ಮೇಲ್ಕಂಡ ಹುದ್ದೆಗಳ ಭರ್ತಿಯ ನಂತರ, ಅಗತ್ಯವಿದ್ದಲ್ಲಿ ಇಲಾಖೆಯಲ್ಲಿ ಮಂಜೂರಾಗಿರುವ ಹಾಗೂ ಖಾಲಿ ಇರುವ ಹುದ್ದೆಗಳ ವಿವರವನ್ನು ಈ ಕೆಳಕಂಡ ನಮೂನೆಯಲ್ಲಿ ಪ್ರಸ್ತಾವನೆ ಸಲ್ಲಿಸುವಂತೆ ಈ ಮೂಲಕ ತಮಗೆ ತಿಳಿಸಲು ನಾನು ನಿರ್ದೇಶಿಸಲ್ಪಟ್ಟಿದ್ದೇನೆ.

| ವಿವರ | ಮಂಜೂರಾದ ಹುದ್ದೆಗಳು | ನೇಮಕಾತಿಗೆ ಸಿ & ಆರ್ ನಲ್ಲಿ ನಿಗದಿಪಡಿಸಿರುವ ಕೋಟಾ | | ಒಟ್ಟು ಮಂಜೂರಾದ ಹುದ್ದೆಗಳು | | ಒಟ್ಟು ಭರ್ತಿಯಾಗಿರುವ ಹುದ್ದೆಗಳು | | ಒಟ್ಟು ಖಾಲಿಯಿರುವ ಹುದ್ದೆಗಳು | | ಇತರೆ ಭರ್ತಿಯಾಗಿರುವ ಹುದ್ದೆಗಳು | | |
|---|---|---|---|---|---|---|---|---|---|---|---|---|
| | | DR | PR | DR | PR | DR | PR | DR | PR | ನಿಯೋಜನೆ | ಗುತ್ತಿಗೆ | ಹೊರಗುತ್ತಿಗೆ |
| ವೃಂದ & ವೇತನ ಶ್ರೇಣಿ | | | | | | | | | | | | |
| ಕಲ್ಯಾಣ ಕರ್ನಾಟಕ ವೃಂದ (KK) | | | | | | | | | | | | |
| ಉಳಿಕೆ ಮೂಲ ವೃಂದ (Non KK) | | | | | | | | | | | | |
| ಒಟ್ಟು | | | | | | | | | | | | |

ತಮ್ಮ ವಿಶ್ವಾಸಿ,

(ನೇತ್ರಪ್ರಭಾ ಎಂ. ಧಾಯಪುಲೆ)
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ಆಡಳಿತ & ಮುಂಗಡಗಳು)

ಕರ್ನಾಟಕ ಸರ್ಕಾರ

**ಕರ್ನಾಟಕ ಸರ್ಕಾರ**

ಸಂಖ್ಯೆ:ಸಿಆಸುಇ 388 ಸನೆನಿ 2024

ಕರ್ನಾಟಕ ಸರ್ಕಾರದ ಸಚಿವಾಲಯ
ವಿಧಾನ ಸೌಧ
ಬೆಂಗಳೂರು, ದಿನಾಂಕ: 25.11.2024

**ಸುತ್ತೋಲೆ**

**ವಿಷಯ:** ರಾಜ್ಯ ಸಿವಿಲ್ ಸೇವೆಗಳಲ್ಲಿನ ಹುದ್ದೆಗಳ ನೇಮಕಾತಿಗಾಗಿ ಹೊಸದಾಗಿ ಅಧಿಸೂಚನೆ ಹೊರಡಿಸುವುದನ್ನು ತಡೆಹಿಡಿಯುವ ಬಗ್ಗೆ.

**ಉಲ್ಲೇಖ:** ಸಮಾಜ ಕಲ್ಯಾಣ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ: SWD/08/SLP/2024 (P-5), ದಿನಾಂಕ: 13.11.2024

******

ದಿನಾಂಕ: 28.10.2024 ರಂದು ನಡೆದ ಸಚಿವ ಸಂಪುಟ ಸಭೆಯಲ್ಲಿ ತೆಗೆದುಕೊಂಡ ನಿರ್ಣಯದಂತೆ ರಾಜ್ಯ ಸಿವಿಲ್ ಸೇವೆಗಳಲ್ಲಿನ ಮೀಸಲಾತಿ ಅನ್ವಯವಾಗುವ ವೃಂದಗಳಲ್ಲಿನ ಹುದ್ದೆಗಳಿಗೆ ನೇರ ನೇಮಕಾತಿ ಮಾಡಲು ಹೊಸದಾಗಿ ಯಾವುದೇ ಅಧಿಸೂಚನೆಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ಮುಂದಿನ ಆದೇಶದವರೆಗೂ ಹೊರಡಿಸಬಾರದೆಂದು ಸೂಚಿಸಲಾಗಿದೆ.

ಈ ದಿನಾಂಕದ ಪೂರ್ವದಲ್ಲಿ ನೇರ ನೇಮಕಾತಿಗಾಗಿ ಅಧಿಸೂಚನೆ ಹೊರಡಿಸಿದ್ದಲ್ಲಿ ಅಥವಾ ಆಯ್ಕೆ ಪ್ರಕ್ರಿಯೆ ಪ್ರಾರಂಭಗೊಂಡಿದ್ದಲ್ಲಿ ಅಂತಹ ನೇಮಕಾತಿಗಳಿಗೆ ಹೊರಡಿಸಲಾಗಿದ್ದ ಅಧಿಸೂಚನೆಯನ್ವಯವೇ ಪೂರ್ಣಗೊಳಿಸಬಹುದಾಗಿದೆ.

ಮೇಲ್ಕಂಡ ಸೂಚನೆಗಳನ್ನು ಎಲ್ಲಾ ಆಯ್ಕೆ ಪ್ರಾಧಿಕಾರಗಳು/ನೇಮಕಾತಿ ಪ್ರಾಧಿಕಾರಗಳು ಕಟ್ಟುನಿಟ್ಟಾಗಿ ಪಾಲಿಸತಕ್ಕದು.

25-11-2024
(ವೀರಭದ್ರ)
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಆಸು ಇಲಾಖೆ (ಸೇವಾ ನಿಯಮಗಳು-1)

**ಇವರಿಗೆ:**

ಸಂಕಲನಕಾರರು, ಇ-ರಾಜ್ಯಪತ್ರ

**ಪ್ರತಿ:**

1. ಸರ್ಕಾರದ ಮುಖ್ಯ ಕಾರ್ಯದರ್ಶಿಯವರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರು.

3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರು ಹಾಗೂ ಅಭಿವೃದ್ಧಿ ಆಯುಕ್ತರು.
4. ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು/ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳು
5. ಮಾನ್ಯ ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿಯವರು
6. ಮಾನ್ಯ ರಾಜ್ಯಪಾಲರ ವಿಶೇಷ ಕಾರ್ಯದರ್ಶಿಯವರು.
7. ಎಲ್ಲಾ ಇಲಾಖಾ ಮುಖ್ಯಸ್ಥರು/ ಎಲ್ಲಾ ಪ್ರಾದೇಶಿಕ ಆಯುಕ್ತರು/ ಎಲ್ಲಾ ಜಿಲ್ಲಾಧಿಕಾರಿಗಳು/ ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು/ ಎಲ್ಲಾ ಜಿಲ್ಲಾ ಪೊಲೀಸ್ ಅಧೀಕ್ಷಕರು.
8. *ಮಹಾ ನಿಬಂಧಕರು, ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು.
9. *ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
10. *ನಿಬಂಧಕರು, ಕರ್ನಾಟಕ ರಾಜ್ಯ ಆಡಳಿತ ನ್ಯಾಯಮಂಡಳಿ, ಕಂದಾಯ ಭವನ, ಕೆ.ಜಿ.ರಸ್ತೆ, ಬೆಂಗಳೂರು.
11. *ಕಾರ್ಯದರ್ಶಿ, ಕರ್ನಾಟಕ ಲೋಕಸೇವಾ ಆಯೋಗ, ಬೆಂಗಳೂರು.
12. ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ಪರೀಕ್ಷಾ ಪ್ರಾಧಿಕಾರ, ಬೆಂಗಳೂರು.
13. *ಕಾರ್ಯದರ್ಶಿ, ಕರ್ನಾಟಕ ವಿಧಾನ ಸಭೆ/ಪರಿಷತ್ತು, ಬೆಂಗಳೂರು.
14. ಶಾಖಾ ರಕ್ಷಾ ಕಡತ/ಬಿಡಿ ಪ್ರತಿಗಳು